ಒ.ಎಸ್. ನಂ.32/2018
ಪಿ.ಡಬ್ಲ್ಯೂ-1

ದಿನಾಂಕ 18.10.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ದಾವಾ ಸ್ವತ್ತಿನಲ್ಲಿ ಮನೆಗಳಿವೆ ಎಂದರೆ ಸರಿ. ಸದರಿ ಮನೆಗಳು 40-50 ವರ್ಷಗಳಿಂದ ಇವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಜನರು ನೀರು ಕುಡಿಯಲು ಸರಕಾರದಿಂದ ಬಾವಿ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಮನೆಗಳ ಮುಂದೆ ಪಂಚಾಯತಿಯವರು ಸಿಸಿ ರಸ್ತೆ ಮಾಡಿರುತ್ತಾರೆ. ಅದೇ ರೀತಿ ದಾವಾ ಸ್ವತ್ತಿನಲ್ಲಿ ಅಂಗನವಾಡಿ ಶಾಲೆಯಿರುತ್ತದೆ ಎಂದರೆ ಸರಿ. ಪಂಚಾಯತಿ, ಸರಕಾರ ಹಾಗೂ ಶಾಲೆಗಳ ಅಧಿಕಾರಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ದಾವಾ ಸ್ವತ್ತಿನಲ್ಲಿ ಈಗ ಸಾಕ್ಷಿಗೆ ತೋರಿಸಲಾದ ಭಾವಚಿತ್ರದಲ್ಲಿ ಕಾಣಿಸುವ ಬೋರವೆಲ್ ಇರುತ್ತದೆ ಎಂದರೆ ಸರಿ ಸದರಿ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಮತ್ತೊಂದು ಭಾವಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ ಜನರಿಗೆ ಬಟ್ಟೆ ಒಗೆಯಲು ಪಂಚಾಯತಿಯವರು ಕಟ್ಟೆಗಳನ್ನು ಮಾಡಿರುತ್ತಾರೆ ಎಂದು ಸಾಕ್ಷಿ ಒಪ್ಪಿದ್ದು ಸದರಿ ಭಾವಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ಮತ್ತೊಂದು ಭಾವಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅಂಗನವಾಡಿ ಶಾಲೆಯನ್ನು ಸಾಕ್ಷಿ ಒಪ್ಪಿದ್ದು ಸದರಿ ಭಾವಚಿತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿನಲ್ಲಿ 20-30 ಮನೆಗಳಿವೆ ಎಂದರೆ ಸಾಕ್ಷಿಯು 10-12 ಮನಗಳಿವೆ ಎಂದು ನುಡಿಯುತ್ತಾರೆ. ಸದರಿ ಮನೆಗಳು ಅಂದಾಜು ಎಷ್ಟು ವರ್ಷಗಳಿಂದ ಇವೆ ಎಂದು ನನಗೆ ಗೊತ್ತಿಲ್ಲ. ಪಂಚಾಯತಿಯವರು ಹರಿಜನ ಸಮಾಜದವರಿಗೆ ಮನೆಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪಂಚಾಯತಿಯವರು ತೆರಿಗೆಯನ್ನು ಸದರಿ ಜನರಿಂದ ಪಡೆಯುತ್ತಿದ್ದಾರೆ ಎಂದರೆ ಸರಿ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ